ಪ್ರಶ್ನೆ ಕ್ರಮಾಂಕ ೧೦೭೯ ಶ್ರೀ ಬಿ. ಸ್ವಾಮಿರಾವ್ ಗೈರು ಹಾಜರಾಗಿದ್ದಾರೆ.

ಅಧ್ಯಕ್ಷರು.—ಈಗ ಗೈರು ಹಾಜರು ಇದ್ದವರ ಹೆಸರನ್ನು ಪುನಃ ಹೇಳುತ್ತೇನೆ.

ಶ್ರೀ ಎಂ.ಎಸ್. ಕೃಷ್ಣನ್.— ಗೈರು ಹಾಜರು.

ಶ್ರೀ ಕೆ. ವಸಂತ ಬಂಗೇರ.—ತಮ್ಮ ಪ್ರಶ್ನೆ ಕ್ರಮಾಂಕ ೧೦೬೯ನ್ನು ಕೇಳಿ.

ವಾಹನ ಚಾಲಕರ ವರ್ಗಾವಣೆ ಬಗ್ಗೆ

೪೦೬೪ ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ)—ಮಾನ್ಯ ರೇಷ್ಮೆ ಮತ್ತು ಪಶುಸಂಗೋಪನೆ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಕ್ಯೂಲಾದಲ್ಲಿರುವ ಜಿಲ್ಲಾ ಜಾನುವಾರು ಕ್ಷೇತ್ರದ ಹಂದಿ ತಳಿ ಸಂವರ್ಧನ ಕೇಂದ್ರದ ವಾಹನ ಚಾಲಕರು ಅಲ್ಲಿ ೨೦ ವರ್ಷಗಳಿಂದಲೂ ಮಿಕ್ಕಿ ಸೇವೆ ಸಲ್ಲಿಸುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಸರ್ಕಾರದ ನಿಯಮದಂತೆ ಈ ವಾಹನ ಚಾಲಕರಿಗೆ ವರ್ಗಾವಣೆ ಇಲ್ಲವೆ ?

ಇ) ವರ್ಗಾವಣೆ ಇದ್ದಲ್ಲಿ ಈ ವರೆಗೆ ಯಾಕೆ ವರ್ಗಾವಣೆ ಮಾಡಲಿಲ್ಲ ಆದಕ್ಕೆ ಕಾರಣಗಳೇನು ?

ಶ್ರೀ ಕೃಷ್ಣ (ಪಶು ಸಂಗೋಪನೆ ಮತ್ತು ರೇಷ್ಮೆ ಇಲಾಖಾ ಸಚಿವರು)—

ಅ) ೧೫ ವರ್ಷಗಳಿಂದ (ದಿನಾಂಕ ೧೭-೩-೭೩ ರಿಂದ) ಸೇವೆ ಸಲ್ಲಿಸುತ್ತಿದ್ದಾರೆ.

ಆ) ಇದೆ.

ಇ) ೧೯೭೮ಕ್ಕೆ ಮುಂಚೆ ಚಾಲಕ ವರ್ಗದವರು 'ಡಿ' ದರ್ಜೆ ನೌಕರರ ವರ್ಗಕ್ಕೆ ಸೇರಿದ್ದ ಪ್ರಯುಕ್ತ ಸಾಮಾನ್ಯವಾಗಿ 'ಡಿ' ದರ್ಜೆ ನೌಕರರಿಗೆ ವರ್ಗಾವಣೆ ಮಾಡುವಂತಿರಲಿಲ್ಲ. ಆದುದರಿಂದ ಆಗ ವರ್ಗಾವಣೆ ಪ್ರಶ್ನೆ ಬರುವುದಿಲ್ಲ. ಸರ್ಕಾರಿ ಆದೇಶ ಸಂಖ್ಯೆ ಡಿಪಿಎಆರ್ ೮೬ ಎಸ್‌ಟಿಆರ್ ೭೬ ದಿನಾಂಕ ೨೨-೧೧-೧೯೭೮ ಪ್ರಕಾರ ವಾಹನ ಚಾಲಕರಿಗೆ ಜಿಲ್ಲೆಯಿಂದ ಹೊರಗೆ ವರ್ಗಾವಣೆ ಮಾಡುವಂತಿಲ್ಲ.

ಚಾಲಕರ ಮೇಲೆ ಏನಾದರೂ ದೂರುಗಳಿದ್ದು ಅದು ಸ್ಥಿರಪಟ್ಟಲ್ಲಿ, ಅಂತಹ ಸಂದರ್ಭಗಳಲ್ಲಿ ಚಾಲಕರನ್ನು ವರ್ಗಾವಣೆ ಮಾಡಬಹುದು. ಈ ಬಗ್ಗೆ ಈಗಾಗಲೇ ಜಿಲ್ಲಾ ಪರಿಷತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಿಗೂ ಮತ್ತು ಇಲಾಖಾ ಜಂಟಿ ನಿರ್ದೇಶಕರು, ಮೈಸೂರು ಇವರಿಗೂ ಈ ನೌಕರರನ್ನು ವರ್ಗಾವಣೆ ಮಾಡಲು ತಿಳಿಸಲಾಗಿದೆ.

ಶ್ರೀ ಕೆ. ವಸಂತಬಂಗೇರ —ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ಸದರಿ 'ಡಿ' ವರ್ಗದ ನೌಕರರನ್ನು ಜಿಲ್ಲೆಯಿಂದ ಹೊರಗಡೆ ವರ್ಗಾವಣೆ ಮಾಡುವಂಥಾದ್ದಕ್ಕೆ ಅವಕಾಶ ಇಲ್ಲವೆಂದು ಹೇಳಿದ್ದಾರೆ. ಈ ವಾಹನ ಚಾಲಕರ ಮೇಲೆ ಅನೇಕ ವರ್ಷಗಳಿಂದ ಅನೇಕ ರೀತಿಯ ದೂರುಗಳನ್ನು ಸರಕಾರಕ್ಕೆ ಕೊಟ್ಟಿದ್ದು, ಅದರ ಪ್ರಕಾರ ಹಿಂದಿನ ಸಚಿವರು ಸದರಿ ಚಾಲಕನನ್ನು ವರ್ಗಾವಣೆ ಮಾಡಬೇಕೆಂದು ಆಜ್ಞೆಯನ್ನು ಮಾಡಿದ್ದಾರೆ. ಒಂದು ವೇಳೆ ಜಿಲ್ಲೆಯ ಹೊರಗಡೆ ವರ್ಗಾವಣೆ ಮಾಡುವುದಕ್ಕೆ ನಿಯಮಗಳು ಇಲ್ಲವಾದಲ್ಲಿ ಇವರನ್ನು ಜಿಲ್ಲೆಯ ಒಳಗಡೆ ಏತಕ್ಕೆ ವರ್ಗಾವಣೆ ಮಾಡಬಾರದು ? ಈ ಚಾಲಕನ ಮೇಲೆ ಅನೇಕ ರೀತಿಯ ದೂರುಗಳಿದ್ದು ಅವುಗಳಲ್ಲಿ ಪ್ರಾಮುಖ್ಯವಾಗಿ, ಪೆಟ್ರೋಲ್‌ನ್ನು ಕದ್ದು ಮಾರಾಟ ಮಾಡುವುದು, ಫಾರ್ಮ್‌ನಲ್ಲಿನ ಹೆಲ್ಲು ಕದ್ದು ಮಾರಾಟ ಮಾಡುವುದು, ಅಲ್ಲಿಯ ಮರಗಳನ್ನು ಕಡಿದು ಮಾರಾಟ ಮಾಡುವುದು, ಚಾಕೂ, ಚೂರಿ ಸಂಸ್ಕೃತಿಯನ್ನು ಬೆಳೆಸಿಕೊಂಡು ಬಂದಿರುವುದು ಮುಂತಾಗಿ ದೂರುಗಳು ಇವೆ. ಈ ಸಂಬಂಧವಾಗಿ ಹಿಂದಿನ ಸಚಿವರು ವರ್ಗಾವಣೆಗೆ ಆಜ್ಞೆ ಮಾಡಿದ್ದರೂ ಕೂಡ ತಾವುಗಳು ಆಗುವುದಿಲ್ಲ ಎಂದು ಹೇಳಿದ್ದೀರಿ. ಹೀಗೆ ದೂರುಗಳು ಇದ್ದರೂ ಕೂಡ ಏನೂ ಕ್ರಮ ತೆಗೆದುಕೊಳ್ಳದೇ, ವರ್ಗಾವಣೆ ಮಾಡದೇ ಇರುವುದು ಸೂಕ್ತವೇ ?

ಶ್ರೀ ಕೃಷ್ಣ.—ಮಾನ್ಯ ಅಧ್ಯಕ್ಷರೇ, ಯಾವ ಕಾರಣಕ್ಕೋಸ್ಕರವಾಗಿ ಇವರನ್ನು ವರ್ಗಾವಣೆ ಮಾಡಿಲ್ಲ ಎಂದು ನಾನು ಉತ್ತರದಲ್ಲಿ ಹೇಳಿದ್ದೇನೆ. ಈ ಸಂಬಂಧವಾಗಿ ಈಗಾಗಲೇ ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯದರ್ಶಿಗಳವರಿಗೆ ಸದರಿ ಸಿಬ್ಬಂದಿಯನ್ನು ವರ್ಗಾವಣೆ ಮಾಡಲು ಆದೇಶ ಕೊಡಲಾಗಿದೆ. ಮಾನ್ಯ ಸದಸ್ಯರು ಅನೇಕ ರೀತಿಯ ದೂರುಗಳನ್ನು ಹೇಳಿದ್ದಾರೆ. ನಿರ್ದಿಷ್ಟವಾದ ದೂರುಗಳನ್ನು ಕೊಟ್ಟರೆ ಆ ಬಗ್ಗೆ ವಿಚಾರಣೆ ಮಾಡಿಸುತ್ತೇನೆ.

ಶ್ರೀ ವಸಂತ ಬಂಗೇರ.—ಹಿಂದಿನ ಸಚಿವರು ಈ ದೂರುಗಳ ಬಗ್ಗೆ ಸ್ವತಃ ಹೋಗಿ ವಿಚಾರಣೆ ನಡೆಸಿ ದೂರು ನಿಜ ಎಂದು ಅವರನ್ನು ವರ್ಗಾವಣೆ ಮಾಡಬೇಕೆಂದು ಬಂದಿದ್ದರು ಹೀಗಿದ್ದರೂ ಏಕೆ ಇನ್ನೂ ವರ್ಗಾವಣೆಯಾಗಿಲ್ಲ ? ಸರ್ಕಾರ ಖರ್ಚು ಮಾಡಿದ ಕೋಟಿಗಟ್ಟಲೆ ಹಣ ಹೀಗೆ ದುರುಪಯೋಗವಾಗುತ್ತಿರುವುದನ್ನು ತಡೆಗಟ್ಟುವ ಸಲುವಾಗಿ ವರ್ಗ ಮಾಡಿ,

ಶ್ರೀ ಕೃಷ್ಣ.—ದಕ್ಷಿಣ ಕನ್ನಡದ ಜಿಲ್ಲಾ ಪರಿಷತ್ ಮುಖ್ಯ ಕಾರ್ಯದರ್ಶಿಗಳಿಗೆ ಬರೆದು ಅವರನ್ನು ಬೇರೆ ಕಡೆ ವರ್ಗ ಮಾಡಲು ಆದೇಶ ನೀಡಲಾಗಿದೆ.

ಶ್ರೀ ಕೆ. ವಸಂತ ಬಂಗೇರ.—ಆದೇಶ ಕೊಟ್ಟು ೮ ತಿಂಗಳಾಯಿತು. ಆದರೂ ಒಬ್ಬ ವಾಹನ ಚಾಲಕನನ್ನು ವರ್ಗ ಮಾಡುವುದಕ್ಕೆ ಆಗಲಿಲ್ಲ ಎಂದರೆ ಇದು ವಿಚಿತ್ರ.

ಶ್ರೀ ಕೃಷ್ಣ.—ಅವರು ಜಿಲ್ಲಾ ಪರಿಷತ್ ನೌಕರರಾಗಿರುವುದರಿಂದ ಅವರೇ ವರ್ಗ ಮಾಡಬೇಕು. ಆದ್ದರಿಂದ ಮುಖ್ಯ ಕಾರ್ಯದರ್ಶಿಗಳೊಂದಿಗೆ ಮಾತನಾಡಿ ವರ್ಗ ಮಾಡಲು ಹೇಳಿಕಳ್ತೇನೆ.

ಶ್ರೀ ಕೆ. ವಸಂತ ಬಂಗೇರ.—ಅದನ್ನು ಎಷ್ಟು ಸಮಯದೊಳಗೆ ಮಾಡುತ್ತೀರಿ ಮತ್ತು ಇದಕ್ಕೆ ಕಾರಣರಾದವರ ವಿರುದ್ಧ ಯಾವ ರೀತಿ ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದನ್ನು ಹೇಳಬೇಕು.

ಶ್ರೀ ಕೃಷ್ಣ.—ಸ್ಪಷ್ಟವಾಗಿ ಹೇಳಿದ್ದೇನೆ. ಕೂಡಲೇ ಇದರ ಬಗ್ಗೆ ವಿಚಾರಣೆ ಮಾಡಿಸಿ ವರ್ಗ ಮಾಡಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

ಸುಳ್ಯದಿಂದ ಬೆಂಗಳೂರಿಗೆ ಸೂಪರ್ ಡೀಲಕ್ಸ್ ಬಸ್ ಹಾಕುವುದು

೫೦೫೦. ಶ್ರೀ ಕೆ. ಕಂಠಾಲ (ಸುಳ್ಯ)—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸುಳ್ಯದಿಂದ ಬೆಂಗಳೂರಿಗೆ ರಾತ್ರಿ ವೇಳೆ ಸೂಪರ್ ಡಿಲಕ್ಸ್ ಬಸ್ಸನ್ನು ಓಡಿಸುವಂತೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯನ್ನು ಸುಳ್ಯ ಕ್ಷೇತ್ರದ ಜನರು ಕೇಳಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಸೂಪರ್ ಡಿಲಕ್ಸ್ ಬಸ್ಸನ್ನು ಸುಳ್ಯಕ್ಕೆ ಒದಗಿಸುವಂತೆ ಇಲಾಖೆ ಹಾಗೂ ಸಚಿವರು ಹೇಳಿದ್ದರೂ ಸಹ ಈ ತನಕ ಕ್ರಮ ಕೈಗೊಳ್ಳದಿರಲು ಕಾರಣವೇನು ?

ಇ) ಹಾಗಿದ್ದಲ್ಲಿ ಯಾವಾಗ ಕ್ರಮ ಕೈಗೊಳ್ಳಲಾಗುವುದು ?

ಶ್ರೀ ಸಿದ್ದರಾಮಯ್ಯ (ಸಾರಿಗೆ ಮಂತ್ರಿಗಳು) —

ಅ) ಬಂದಿದೆ.

ಆ) ಮಾನ್ಯ ಸಾರಿಗೆ ಸಚಿವರು ಪರಿಶೀಲಿಸುವುದಾಗಿ ಹೇಳಿದ್ದರು.

ಇ) ದಿನಾಂಕ ೨೫-೭-೮೮ ರಿಂದ ಒಂದು ಅರೆ ಸಂಖಾಸೀನ ಸಾರಿಗೆಯನ್ನು ಒದಗಿಸಲಾಗಿದೆ. ಆದ ಕಾರಣ ಸದ್ಯಕ್ಕೆ ಸುವಿಹಾರಿ ಬಸ್ಸನ್ನು ಒದಗಿಸಿಲ್ಲ.

ಶ್ರೀ ಕೆ. ಕಂಠಾಲ.—ಮೂರು ವರ್ಷಗಳಿಂದಲೂ ಪರಿಶೀಲಿಸುವುದಾಗಿ ಹಿಂದಿನ ಸಚಿವರು ಹೇಳಿದ್ದರು, ಸಂಸ್ಥೆಯ ಎಂ.ಡಿ.ರವರೂ ಕೂಡ ಬಸ್ ಹಾಕಿಸುತ್ತೇನೆ ಎಂದಿದ್ದರು, ಈತನಕ ಕೊಟ್ಟಿಲ್ಲ, ಈಗ ಅರೆಸಂಖವಿಹಾರಿ ಬಸ್ಸನ್ನು ಹಾಕಿದ್ದಾರೆ, ನಾವು ಕೇಳಿದ್ದು ಸುಖವಿಹಾರಿ ಬಸ್ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.